ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ, ಕೊಪ್ಪಳ ಮತ ಕ್ಷೇತ್ರ ಇವರು ವಿಜಯಪುರ ಜಿಲ್ಲೆಯಲ್ಲಿರುವ ಆಲಮಟ್ಟಿ ಡ್ಯಾಂ ಎತ್ತರಿಸಬೇಕು. ಪ್ರತಿ ಎಕರೆಗೆ ಬರ ಪರಿಹಾರ ಮೊತ್ತ ಹೆಚ್ಚಿಸಬೇಕು. ನೀರಾವರಿ ಯೋಜನೆಗಳನ್ನು ಜಾರಿಗೆ ತರಬೇಕು.

ಇಲ್ಲಿಯ ಸುವರ್ಣ ವಿಧಾನ ಸೌಧ ಬಳಿ ಪ್ರತಿಭಟನೆ ನಡೆಸಿದ ರೈತರು, ಆಲಮಟ್ಟಿ ಹಾಗೂ ನಾರಾಯಣಪೂರ ಡ್ಯಾಂಗಳು ಭರ್ತಿಗಾಗಿ ಸಮುದ್ರಕ್ಕೆ ಹೆಚ್ಚುವರಿಯಾಗಿ ನೀರು ಹರಿದು ಹೋಗಿತ್ತಿದೆ. ಆದರೆ ವಿಜಯಪುರದ ಕೆರೆ, ಹಳ್ಳ, ಬಾಂದಾರಗಳು, ಚೆಕ್ ಡ್ಯಾಂಗಳು, ಇಂಗು ಕೆರೆಗಳು ಬಹುಹಳ್ಳಿ ಕುಡಿಯುವ ನೀರಿನ ಯೋಜನೆಗಳಿಗೆ ಸಕಾಲದಲ್ಲಿ ನೀರು ಹರಿಸುತ್ತಿಲ್ಲ. ಈ ಎಲ್ಲ ಆಕರಗಳಿಗೆ ಕೇನಾಲ 4 ರಿಂದ 5 ಟಿ.ಎಂ.ಸಿ ಅಡಿ ನೀರು ಬೇಕು. ಕುಡಿಯುವ ನೀರಿಗಾಗಿ ಹಪಹಪಿಸುತ್ತಿದ್ದೇವೆ. ದ್ರಾಕ್ಷಿ, ದಾಳಿಂಬೆ, ನಿಂಬೆ ಮುಂತಾದ ಬೇಳೆಗಳು ನೀರಿಲ್ಲದೇ ರೈತರು ಟ್ಯಾಂಕರ್ ಮೂಲಕ ಬೆಳೆಗಳನ್ನು ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ.

ಕೆರೆ ತುಂಬುವ ಯೋಜನೆ ರೇವಣಸಿದ್ದೇಶ್ವರ ಏತ ನೀರಾವರಿ ಕಾಮಗಾರಿಗಳನ್ನು ಸಮಾರೋಪಾದಿಯಲ್ಲಿ ಪೂರ್ಣಗೊಳಿಸಬೇಕು. ತುರ್ತಾಗಿ ಎಲ್ಲಾ ಕೆರೆ, ಹಳ್ಳ, ಬಾಂದಾರುಗಳಿಗೆ ಕಾಲುವೆ ಕೊನೆಯವರೆಗು ನೀರನ್ನು ಹರಿಸಲು ಕ್ರಮ ಕೈಗೊಳ್ಳಬೇಕು. ಆಲಮಟ್ಟಿ 524.256 ಮೀಟರ್ ಎತ್ತರಕ್ಕೆ ಗೇಟ್‌ಗಳನ್ನು ಅಳವಡಿಸಿ ಮುಳುಗಡೆಯ ಸಂತ್ರಸ್ತರಿಗೆ ಯೋಗ್ಯ ಪರಿಹಾರ ನೀಡಬೇಕು. ಡೊಮನಾಳ ಕೆರೆಯಿಂದ ಬೊಮ್ಮನಹಳ್ಳಿ ಕೆರೆಯವರೆಗೆ ನೀರು ಹರಿಸಿದರೆ ಜನ ಜಾನುವಾರುಗಳಿಗೆ ಅನುಕೂಲವಾಗುತ್ತದೆ.

ಡೋಣಿ ನದಿಯ ಜಲಾಶಯ ಪ್ರದೇಶದಲ್ಲಿ ಜಮೀನುಗಳಿಂದ ಮಣ್ಣು ಹರಿದು ಬರದಂತೆ ನಾಲಾ ಬಂಡಿಂಗ್, ಚೆಕ್‌ಡ್ಯಾಂ, ಗಲ್ಲಿಚೆಕ್ಸ್, ಸಮತಟ್ಟು ಮಾಡಿ ಮಣ್ಣಿನ ಸಂರಕ್ಷಣೆ ಮಾಡಬೇಕು. ಬರಪೀಡಿತ ಪ್ರದೇಶಗಳ ಪ್ರತಿ ಎಕರೆಗೆ 20 ಸಾವಿರರೂ. ನೀಡಬೇಕು. ಆದ್ದರಿಂದ, ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಎಂಬ ವಿಷಯದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಾಗಿರುವ ವಿಷಯಕ್ಕೆ ಮಾಹಿತಿ.

*****

ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನ ವರದಿಯನ್ವಯ ಆಲಮಟ್ಟಿ ಆಣೆಕಟ್ಟಿನಎತ್ತರವನ್ನು 519.60 ಮೀ. ದಿಂದ 524.256 ಮೀ. ಗೆ ಎತ್ತರಿಸಬೇಕಾಗಿದ್ದು, ಸದರಿ ಕ್ರಮವು ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮತೀರ್ಪಿನ ಅಧಿಸೂಚನೆಗೆ ಒಳಪಟ್ಟಿರುತ್ತದೆ. ಪ್ರತಿ ಎಕರೆಗೆ ಬರ ಪರಿಹಾರದ ಮೊತ್ತ ಹೆಚ್ಚಿಸುವ ಹಾಗೂ ವಿತರಿಸುವ ವಿಷಯವು ಕಂದಾಯ ಇಲಾಖೆಯಿಂದ ಪರಿಶೀಲಿಸಲಾಗುವುದು.

ಆಲಮಟ್ಟಿ ಜಲಾಶಯಕ್ಕೆ ಒಳಹರಿವು ಪ್ರಾರಂಭವಾದ ನಂತರ ಪ್ರತಿ ವರ್ಷ ಆಗಸ್ಟ್-15ರ ವರೆಗೆ ಆಲಮಟ್ಟಿ ಜಲಾಶಯದಲ್ಲಿ ನೀರಿನ ಮಟ್ಟವನ್ನು 517.50 ಮೀ. (ಪೂರ್ಣ ಮಟ್ಟ 519.60 ಮೀ.)ಗೆ ಅಂತರ್ ರಾಜ್ಯ ಮಹಾಪೂರ ನಿಯಂತ್ರಣ ನಿಯಮಗಳ ಅನುಸಾರ ಕ್ರಮ ಜರುಗಿಸಲಾಗುತ್ತಿದ್ದು, ಅದರಂತೆ ನಿಯಂತ್ರಿಸಿಕೊಂಡು ಆಲಮಟ್ಟಿ ಜಲಾಶಯದ ಕೆಳಭಾಗದ ನಾರಾಯಣಪುರ ಜಲಾಶಯದ (33.31 ಟಿ.ಎಂ.ಸಿ.) ಪೂರ್ಣ ಮಟ್ಟ ತಲುಪಿದ ನಂತರ ಹೆಚ್ಚುವರಿ ನೀರನ್ನು ಕೆಳಗೆ ನದಿ ಪಾತ್ರಕ್ಕೆ ಹರಿಸಲಾಗುತ್ತದೆ. ಆಗಸ್ಟ್-15 ರ ನಂತರ ಆಲಮಟ್ಟಿ ಜಲಾಶಯದಲ್ಲಿ ಪೂರ್ಣಮಟ್ಟ 519.60 ಮೀ. ವರೆಗೆ ನೀರಿನ ಸಂಗ್ರಹಣೆಯನ್ನು ಕಾಯ್ದುಕೊಳ್ಳಲಾಗುತ್ತಿದೆ.

ವಿಜಯಪುರ ಜಿಲ್ಲೆಯ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1, 2 & 3ರಡಿ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. 2023-24ನೇ ಸಾಲಿನಲ್ಲಿ ಆಲಮಟ್ಟಿ ಜಲಾಶಯಕ್ಕೆ ಒಳಹರಿವು ಬಂದ ನಂತರ ದಿನಾಂಕ: 21.07.2023 ರಿಂದ ಒಳಹರಿವು ಸ್ಥಗಿತವಾಗುವವರೆಗೆ (15.09.2023) 2.50 ಟಿ.ಎಂ.ಸಿ. ನೀರನ್ನು ಕೆರೆಗಳನ್ನು ತುಂಬಿಸಲು ಬಳಸಲಾಗಿದೆ. ಇದಲ್ಲದೇ, ಮುಂಗಾರು ಹಂಗಾಮಿನಲ್ಲಿ ಮಳೆಯಾಗದೇ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಾಗಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿರುವುದನ್ನು

ಪರಿಗಣಿಸಿ, 3.00 ಟಿ.ಎಂ.ಸಿ. ನೀರನ್ನು ದಿನಾಂಕ: 20.10.2023 ರಿಂದ 10.12.2023 ರ ವರೆಗೆ ನೀರನ್ನು ಕೆರೆಗಳನ್ನು ತುಂಬಲು ಬಳಸಲಾಗಿದೆ.

ಕೃ.ಮೇ.ಯೋ. ಹಂತ–3ರ ಅಡಿ ಬರುವ ಕೆರೆಗಳನ್ನು ಕೇವಲ ಜನ–ಜಾನುವಾರುಗಳ ಕುಡಿಯುವ ನೀರಿಗಾಗಿ ಮಾತ್ರ ತುಂಬಿಸಲು ಅವಕಾಶವಿದೆ. ಆದರೆ, ನೀರಾವರಿಗಾಗಿ ನೀರು ಪೂರೈಸಲು ಸಧ್ಯ ಆಲಮಟ್ಟಿ ಜಲಾಶಯದಲ್ಲಿ ಹೆಚ್ಚುವರಿ ನೀರು ಸಂಗ್ರಹಣೆಗೆ ಅವಕಾಶವಿರುವುದಿಲ್ಲ. ದಿನಾಂಕ:07.11.2023ರಂದು ಜರುಗಿದ ನೀರಾವರಿ ಸಲಹಾ ಸಮಿತಿಯಲ್ಲಿ ಹಿಂಗಾರು ಹಂಗಾಮಿಗೆ ನೀರು ಪೂರೈಸದೇ ದಿನಾಂಕ: 30.06.2024ರ ವರೆಗೆ ತುರ್ತು ಬಳಕೆಗಾಗಿ 28 ಟಿ.ಎಂ.ಸಿ. ನೀರಿನ ಸಂಗ್ರಹಣೆಯನ್ನು ಆಲಮಟ್ಟಿ ಜಲಾಶಯದಲ್ಲಿ ಕಾಯ್ದಿರಿಸಿಕೊಳ್ಳಲು ತೀರ್ಮಾನಿಸಲಾಗಿದೆ.

ಇಂಡಿ ತಾಲ್ಲೂಕಿನ ನೀರಾವರಿ ವಂಚಿತ 28,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಹೊರ್ತಿ–ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯ 1 ನೇ ಹಂತದ ಇನ್‌ಟೇಕ್ ಕೆನಾಲ್, ಜಾಕ್‌ವೆಲ್ ಮತ್ತು ಪಂಪ್‌ಹೌಸ್, 220 ಕೆ.ವಿ ಸಬ್ ಸ್ಟೇಷನ್ ಮತ್ತು ಟ್ರಾನ್ಸ್‌ಮಿಷನ್ ಲೈನ್ ಹಾಗೂ 25.86 ಕಿ.ಮೀ ರೈಸಿಂಗ್‌ಮೆನ್ (ಡೋಣಿ ನದಿಯವರೆಗೆ) ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ. 2ನೇ & 3ನೇ ಹಂತದ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ವಯ ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುವುದು.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ಕ್ಕೆ ಸಂಬಂಧಿಸಿದಂತೆ, ಆಲಮಟ್ಟಿ ಆಣೆಕಟ್ಟಿನ ಗೇಟಿನ ಎತ್ತರವನ್ನು 519.60 ಮೀ. ದಿಂದ 524.256 ಮೀ. ಗೆ ಎತ್ತರಿಸಿದಾಗ ಮುಳುಗಡೆಯಾಗುವ ಜಮೀನುಗಳಿಗೆ ದಿನಾಂಕ: 25.01.2023ರ ಆದೇಶದನ್ವಯ ಪ್ರತಿ ಎ ಕರೆಗೆ ಒಣ ಭೂಮಿಗೆ ರೂ.5.00 ಲಕ್ಷ ಹಾಗೂ ಪ್ರತಿ ಎಕರೆ ನೀರಾವರಿ ಮತ್ತು ಭಾಗಾಯತ್ ಭೂಮಿಗೆ ರೂ.6.00 ಲಕ್ಷದಂತೆ ಏಕ ರೂಪ ದರ ನಿಗಧಿಪಡಿಸಲಾಗಿದ್ದು, ಒಪ್ಪಂದದ ಐತೀರ್ಪಿನ್ವಯ ಪರಿಹಾರ ನೀಡಲು ಕ್ರಮ ವಹಿಸಲಾಗುವುದು.

ಡೋಮನಾಳ ಹಾಗೂ ಬೊಮ್ಮನಹಳ್ಳಿ ಕೆರೆಗಳನ್ನು ತಿಡಗುಂದಿ ಶಾಖಾ ಕಾಲುವೆಯಿಂದ ಈಗಾಗಲೇ ಅಗತ್ಯಕ್ಕೆ ತಕ್ಕಂತೆ ಆದ್ಯತೆಯ ಮೇರೆಗೆ ತುಂಬಿಸಲಾಗಿದೆ.

ಡೋಣಿ ನದಿ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣೆ ಕುರಿತು ಕೇಂದ್ರ ಜಲ ಆಯೋಗದ ಮಾರ್ಗಸೂಚಿ/ಮಾದರಿಗಳನ್ವಯ ಪ್ರಾಥಮಿಕ ಯೋಜನಾ ವರದಿಯನ್ನು ತಯಾರಿಸಿದ್ದು, ನಿಗಮದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ.

ಜಸಂಇ 149 ಡಬ್ಲ್ಯೂಬಿಎಂ 2023

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು